# DRAWING COMPETITION @ SRS

### ಎಸ್‌ಆರ್‌ಎಸ್ ವಿದ್ಯಾಸಂಸ್ಥೆ ಹಾಗೂ ಅರಣ್ಯ ಇಲಾಖೆ ಸಹಯೋಗ | ಸಾಮಾಜಿಕ ಕಾಳಜಿ ಮೆರೆದ ಮಕ್ಕಳು

## ಚಿತ್ರ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ನಾಳೆ

■ ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿಜಯವಾಣಿ ಹಾಗೂ ದಿಗ್ವಿಜಯ ವಾಹಿನಿ ಆಯೋಜಿಸಿದ್ದ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆಯ ವಿಜೇತರಿಗೆ ಜೂ.13 ರಂದು ಬಹುಮಾನ ವಿತರಣೆ ನಡೆಯಲಿದೆ. ನಗರದ ಉಪ ಅರಣ್ಯ ಸಂರಕ್ಷಣಾ ಕಚೇರಿಯಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಟಿ.ರಾಜಣ್ಣ ಮತ್ತಿತರ ಗಣ್ಯರು ಭಾಗವಹಿಸುವರು. ಸ್ಪರ್ಧೆಗೆ ಎಸ್‌ಆರ್ ಎಸ್ ವಿದ್ಯಾಸಂಸ್ಥೆ ಹಾಗೂ ಅರಣ್ಯ ಇಲಾಖೆ ಸಹಯೋಗ ನೀಡಿದ್ದವು.


ದಿಗ್ವಿಜಯ 24X7 NEWS
ಹೈವೋಲ್ಟೇಜ್ ಸುದ್ದಿಗೆ ಗುದ್ದು
BURNING STORY
ಪ್ರತಿದಿನ ರಾತ್ರಿ 8.57ಕ್ಕೆ






### ಸೀನಿಯರ್ ವಿಭಾಗ

**ಪ್ರಥಮ**

ಉಷಾ ಡಿ. - ಜಿಎಚ್‌ಎಸ್ ಆಲೂರು

**ದ್ವಿತೀಯ**

ವಂಶಿ ಪಿ. -ಎಸ್‌ಆರ್‌ಎಸ್ ಚಿತ್ರದುರ್ಗ

**ತೃತೀಯ ಬಹುಮಾನ**

ವಿಕಾಸ್ - ಸರ್ಕಾರಿ ಪ್ರೌಢಶಾಲೆ ಚಿತ್ರದುರ್ಗ
ಭುವನ್ ಜಿ.ಎಸ್. - ಎಸ್ಆರ್‌ಎಸ್ ಚಿತ್ರದುರ್ಗ
ಧನುಷ್ ಎನ್.ಪಿ. - ಬಾಪೂಜಿ ಶಾಲೆ ಚಿತ್ರದುರ್ಗ

**ಸಮಾಧಾನಕರ**

ಭೂಮಿಕಾ ಎಸ್.ಜಿ. - ಎಸ್ಆರ್‌ಎಸ್ ಚಿತ್ರದುರ್ಗ
ಚಂದ್ರಮೌಳಿ - ಎಸ್‌ಆರ್‌ಎಸ್ ಚಿತ್ರದುರ್ಗ
ದೀಕ್ಷಾ ಎಂ. -ಎಸ್‌ಆರ್‌ಎಸ್ ಚಿತ್ರದುರ್ಗ
ಸಂಜನಾ - ಡಾನ್ ಬಾಸ್ಕೋ ಚಿತ್ರದುರ್ಗ
ಶಂಕರ್ ಪ್ರಸಾದ್ - ಎಸ್ಆರ್‌ಎಸ್ ಚಿತ್ರದುರ್ಗ
ಯಶವಂತ್ ಡಿ.ಎ. - ಸರ್ಕಾರಿ ಪಿಯು ಕಾಲೇಜ್ ಚಿತ್ರದುರ್ಗ
ಇ.ಎಸ್. ವೈಷ್ಣವಿ - ಜ್ಞಾನಪೂರ್ಣ ಶಾಲೆ ಡಿ.ಎಸ್. ಹಳ್ಳಿ
ವೃಂದಾ ಸಿ.ಆರ್. - ಎಸ್ಆರ್‌ಎಸ್ ಚಿತ್ರದುರ್ಗ

### ಜೂನಿಯರ್ ವಿಭಾಗ

**ಪ್ರಥಮ**

ಅನೂಪ್ ಕೆ.ಪಿ. -ಎಸ್ಆರ್‌ಎಸ್ ಚಿತ್ರದುರ್ಗ

**ದ್ವಿತೀಯ**

ಮೊಹಮದ್ ಅಫರಾಜ್-ಎಸ್ಆರ್‌ಎಸ್

**ತೃತೀಯ**

ವೀರು ನಾಯಕ್ ವಿವಿವಿಎಸ್ ಚಿತ್ರದುರ್ಗ
ನಾಗಧೃತಿ ಸಿ. -ಶ್ರೀ ಪಾರ್ಶ್ವನಾಥ ಚಿತ್ರದುರ್ಗ
ಅಂಬಿಕಾ ಸಿರಿ ಸಿ.ಎಂ.-ಎಸ್ಆರ್‌ಎಸ್ ಚಿತ್ರದುರ್ಗ

**ಸಮಾಧಾನಕರ**

ಅರ್ಶಿತಾ ತಿವಾರಿ - ಎಸ್ಆರ್‌ಎಸ್ ಚಿತ್ರದುರ್ಗ
ತರುಣ್ ವಿ. - ಜೆಪಿಎಚ್‌ಎಸ್
ಹಂಸಿಕಾ ವಾಂಜ್ರೆ - ದೀಪಿಕಾ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮೊಳಕಾಲ್ಮೂರು
ಪ್ರಣೀತಾ ಜಿ.ಎಸ್.-ಡಾನ್ ಬಾಸ್ಕೋ ಚಿತ್ರದುರ್ಗ
ಕೇತನ್‌ಕುಮಾರ್ - ಎಸ್ಆರ್‌ಎಸ್ ಚಿತ್ರದುರ್ಗ

**ವಿಶೇಷ ಬಹುಮಾನ**

ಸೈಯದ್ ಅಯಾನ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮದಕರಿಪುರ

### ಕಂಟೆಂಟ್, ಕೌಶಲ ಗಮನಿಸಿ ಆಯ್ಕೆ



ವಿಶ್ವ ಪರಿಸರ ದಿನದ ಅಂಗವಾಗಿ ವಿಜಯವಾಣಿ ಆಯೋಜಿಸಿದ್ದ ಸ್ಥಳದಲ್ಲೇ ಚಿತ್ರಬಿಡಿಸುವ ಸ್ಪರ್ಧೆಯಲ್ಲಿ 571 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದು ನಿಜಕ್ಕೂ ಹರ್ಷದಾಯಕ ವಿಷಯವೇ ಸರಿ.

ಮಕ್ಕಳಿಗೆ ಪಠ್ಯದ ಜತೆ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸಿ, ಅವರಲ್ಲಿರುವ ಪ್ರತಿಭೆ ಅನಾವರಣಕ್ಕೆ ವೇದಿಕೆಯನ್ನೂ ಒದಗಿಸಬೇಕು. ಚಿಕ್ಕಂದಿನಿಂದಲೂ ಅವರಲ್ಲಿ ಸಾಮಾಜಿಕ ಕಾಳಜಿಗಳ ಅರಿವು ಮೂಡಿಸುವ ಮೂಲಕ ಭವಿಷ್ಯದಲ್ಲಿ ಅವರನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಈ ಸ್ಪರ್ಧೆ ವಿದ್ಯಾರ್ಥಿಗಳಲ್ಲಿರುವ ಚಿತ್ರಕಲೆ, ಸಾಮಾಜಿಕ ಕಾಳಜಿಯ ಅನಾವರಣಕ್ಕೆ ಪೂರಕವಾಗಿದೆ.

ನಾವು ರಚಿಸುವ ಚಿತ್ರವೇ ಮಾತನಾಡಬೇಕೆ ಹೊರತು ಟೆಕ್ಸ್ಟ್ ಅಥವಾ ಸಂದೇಶಗಳು ಚಿತ್ರದ ಭವ್ಯತೆಯನ್ನು ಕುಂದಿಸುವ ಸಾಧ್ಯತೆ ಗಳಿವೆ. ಪದಗಳಲ್ಲಿ ಹೇಳದೆ ಚಿತ್ರಕಾರನ ಆಶಯ, ಚಿಂತನೆಗಳನ್ನು ಚಿತ್ರವೇ ಸಾರುವಂತಿರಬೇಕು, ಆತನ ಸೃಜನಶೀಲತೆ ಪರಿಚಯಿಸುವಂತೆ ಇರಬೇಕು.

ಕೈವಾರ, ಸ್ಕೇಲ್ ಇತ್ಯಾದಿ ಉಪಕರಣಗಳ ಬಳಕೆಯಿಂದ ಚಿತ್ರಕಾರನ ಕುಶಲತೆಗೆ ಧಕ್ಕೆಯಾಗಬಹುದು. ಪೆನ್ಸಿಲ್ ಗೆರೆಗಳು, ಬಣ್ಣ, ಬ್ರಶ್ ಮೂಲಕ ಚಿತ್ರವೇ ಮಾತನಾಡುವಂತೆ ಮಾಡಬೇಕು. ಇದನ್ನು ಸಾಧಿಸುವುದು ವಿದ್ಯಾರ್ಥಿಗಳಿಗೆ ಖಂಡಿತಾ ಸಾಧ್ಯವಾಗಲಿದೆ. ಆದರೆ ಕಲಿಯುವ ಆಸಕ್ತಿ, ಶ್ರದ್ಧೆ, ತಾಳ್ಮೆ ಮುಖ್ಯ. ಕಲೆ ಯಾವುದೇ ಇರಲಿ ಅದರ ಯಶಸ್ಸಿಗೆ ಶ್ರಮವೆಂಬ ತಪಸ್ಸು ಬಹು ಮುಖ್ಯ. ಪರಿಸರಕ್ಕೆ ಸಂಬಂಧಿಸಿದ್ದ ವಿಷಯವೇ ಆಗಿದ್ದರೂ ಸ್ಪರ್ಧೆಯಲ್ಲಿದ್ದ ಅನೇಕ ಚಿತ್ರಗಳಲ್ಲಿ ಏಕರೂಪತೆ ಕಂಡು ಬಂದಿದ್ದು ಕೂಡ ಅಚ್ಚರಿ ತರಿಸಿತು. ಸ್ಪರ್ಧೆ ಎಂಬ ಕಾರಣಕ್ಕೆ ರಚಿಸಿದ್ದ ಚಿತ್ರಗಳೂ ಇದ್ದವು. ಭಾಗವಹಿಸಿದ್ದ ನೂರಾರು ವಿದ್ಯಾರ್ಥಿಗಳು ರಚಿಸಿದ್ದ ಅನೇಕ ಚಿತ್ರಗಳು ಒಂದಕ್ಕಿಂತ ಒಂದು ಚೆನ್ನಾಗಿದ್ದು, ವಿಜೇತರ ಆಯ್ಕೆ ಕಠಿಣ ಸವಾಲು ಆಗಿದ್ದಂತೂ ನಿಜ. ಚಿತ್ರ ರಚನೆ, ಒತ್ತಡವನ್ನು ನಿವಾರಿಸಿ, ಆರೋಗ್ಯಕರ ಮನಸು, ಆನಂದಕ್ಕೆ ಕಾರಣವಾಗುತ್ತದೆ. ಕಂಟೆಂಟ್, ಕಾಳಜಿ, ಕಾಂಪೋಸಿಶನ್ ಕುಶಲತೆ ಮತ್ತು ಸ್ಪಷ್ಟತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ವಿಜೇತರನ್ನು ಆಯ್ಕೆ ಮಾಡಲಾಗಿದೆ.

■ ಕ್ರಿಯೇಟಿವ್ ವೀರೇಶ್, ತೀರ್ಪುಗಾರ, ಚಿತ್ರದುರ್ಗ.